ಶ್ರೀ ಕೆ.ಎಸ್.ಕಾಳಮರಿಗೌಡ:- ಅವರು ಆದಮೇಲೆ ನನಗೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು:- ಇಲ್ಲಾ.

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಅಧ್ಯಕ್ಷರೇ ರೈತರಿಗೆ ಹಣವನ್ನು ಪಾವತಿ ಮಾಡುತ್ತೇವೆ ಅವರಿಗೆ ಯಾವುದೇ ತೊಂದರೆ ಆಗುವುದಿಲ್ಲ ಅಂತ ಉತ್ತರದಲ್ಲಿ ಹೇಳಿದ್ದಾರೆ. ಬಹಳ ಸಂತೋಷ ಸ್ವಾಗತಾರ್ಹ. ಆದರೆ 92-93ನೇ ಸಾಲಿಗೆ ಏನು ಬೆಲೆ ನಿಗದಿ ಆಗಬೇಕು. ಆ ಬೆಲೆ ಇನ್ನೂ ಕೂಡ ನಿಗಧಿ ಆಗಿಲ್ಲ ಎರಡು ಮೂರು ಬಾರಿ ನಮ್ಮ ಮಂತ್ರಿಗಳ ಕೊಠಡಿಯಲ್ಲಿ ಸಮಾಲೋಚನಾ ಸಭೆ ಇತ್ತು. ಛೇರ್ಮನ್‌ರಲ್ಲೂ ಕೂಡ ಸಮಾಲೋಚನೆ ಮಾಡಿದ್ದು ಆಗಿದೆ. ಜನರಲ್ ಬಾಡಿಯಲ್ಲೂ ಕೂಡ ರೈತರು ವ್ಯಾಪಕವಾಗಿ ಇದರ ಬಗ್ಗೆ ಪ್ರತಿಭಟನೆಯನ್ನು ವ್ಯಕ್ತ ಮಾಡಿದ್ದಾರೆ. ದಯಮಾಡಿ ಲೆವಿ ಬೆಲೆ ಹೆಚ್ಚಾಗಿರುವುದರಿಂದ ಈ ಮೈಸೂರು ಸಕ್ಕರೆ ಕಾರ್ಖಾನೆಗೆ ಉತ್ತಮವಾದ ಬೆಲೆ ಬರುತ್ತದೆ ಸಕ್ಕರೆಗೆ ಆ ಒಂದು ಒಳ್ಳೆಯ ಬೆಲೆಯನ್ನು ರೈತರಿಗೂ ಕೂಡ ಹಂಚಿಕೊಡತಕ್ಕಂಥ ದೃಷ್ಟಿಯಲ್ಲಿ ಪ್ರೋತ್ಸಾಹ ಕೊಡತಕ್ಕಂಥ ದೃಷ್ಟಿಯಲ್ಲಿ 92-93ನೇ ಸಾಲಿಗೆ 500 ರೂಪಾಯಿಗೆ ಕಡಿಮೆ ಇಲ್ಲದಂತೆ ಬೆಲೆಯನ್ನು ನಿಗಧಿ ಮಾಡಿಕೊಡಬೇಕೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತ ಆ ಕಾರ್ಖಾನೆಯ ಕಾರ್ಯವ್ಯಪ್ತಿಯನ್ನು ಇನ್ನು ದಕ್ಷತೆಯಿಂದ ಪರಿಣಾಕಾರಿಯಾಗಿ ನಿರ್ವಹಿಸಲು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆಗ್ರಹಪಡಿಸುತ್ತಾ ಕಾರಣ ಒಳ್ಳೆಯ ಕಬ್ಬು ಕೊಟ್ಟರೂ ಸಹ ಒಳ್ಳೆಯ ಇಳುವರಿ ಬರುತ್ತಿಲ್ಲಾ ರೈತರಿಗೆ ನಮ್ಮ ಭಾಗದ ರೈತರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ರೈತ ನಷ್ಟವನ್ನು ಅನುಭವಿಸುತ್ತಿದ್ದಾನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಅವರ ಗಮನಕ್ಕೆ ತರುತ್ತಾ ಕಳೆದ 6-7 ತಿಂಗಳಿಂದ ಅಲ್ಲಿನ ಕಾರ್ಮಿಕರು ಮುಷ್ಕರವನ್ನು ಮಾಡಿದ್ದಾರೆ ಆದರೂ ಸಹ ಆಡಳಿತ ಮಂಡಳಿಯವರು ಆ ಬಗ್ಗೆ ಗಮನವನ್ನು ತೆಗೆದುಕೊಂಡಿರುವುದಿಲ್ಲ. ದಯಮಾಡಿ ಆಡಳಿತ ಮಂಡಳಿಯವರು ಆ ಕಾರ್ಖಾನೆಯ ನೌಕರರನ್ನು ಕರೆದು ಸಮಾಲೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಈ ವಿಷಯವಾಗಿ ನನಗೆ ಪೂರ್ವಭಾವಿಯಾಗಿ ಗಮನ ಸೆಳೆದಿಲ್ಲವಾದರೂ ಸಕ್ಕರೆ ಬೆಲೆ ನಿಗಧಿ ಮಾಡುವ ಬಗ್ಗೆ ನಾನು ನಿನ್ನೆಯೇ ಮೇಲ್ಮನೆಯಲ್ಲಿ ವಿವರವಾದಂತಹ ಒಂದು ಹೇಳಿಕೆಯನ್ನು ನೀಡಿದ್ದೇನೆ. ಈಗಾಗಲೇ ಅವರಿಗೂ ಕೂಡ ವಿಷಯ ತಿಳಿಸಿದ್ದಾಗಿದೆ. ಈ ಕಬ್ಬಿನ ಬೆಲೆಯನ್ನು ಸರಿಪಡಿಸುವುದಕ್ಕೋಸ್ಕರ ಪ್ರತ್ಯೇಕವಾಗಿ ನಾನು ಆತ್ಮಾನಂದರು ಮತ್ತು ಇನ್ನಿತರೇ ಶಾಸಕರ ಜೊತೆಯಲ್ಲಿ ನನ್ನ ಕೊಠಡಿಯಲ್ಲಿ ಒಂದು ಸಭೆ ಕರೆದು ಅದನ್ನು ತೀರ್ಮಾನಿಸುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ ಅದೇ ರೀತಿಯಲ್ಲಿ ಆಶ್ವಾಸನೆಯನ್ನು ನಾನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ.

ವಿಷಯ :- ರಾಜ್ಯದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆಗಳನ್ನು ಸೃಷ್ಟಿಸುವಾಗ ಆಗಿರುವ ಅನ್ಯಾಯ

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಈ ಫಸ್ಟ್ ಗ್ರೇಡ್ ಡಿಗ್ರಿ ಕಾಲೇಜುಗಳಲ್ಲಿ ಯು.ಜಿ.ಸಿ.ರೆಕಮೆಂಡೇಶನ್ ಪ್ರಕಾರ ಏನು ಕೇಡರ್ ಪೋಸ್ಟ್ ಕ್ರಿಯೇಟ್ ಮಾಡಿಲ್ಲ ಅದರಿಂದ ಅಲ್ಲಿ ಏನು ಅನ್ಯಾಯವಾಗಿದೆ ಅದರ ಬಗ್ಗೆ ನಾನು ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಎಂ.ಯಾಹ್ಯಾ:-(ಮಾನ್ಯ ಉನ್ನತ ಶಿಕ್ಷಣ ಸಚಿವರು)

In Government Order No ED. 88 UNI 88 Dated 25.03.1989 a separate cadre of Principal Grade ' was created in the Colleges where the students strength was

2000 or more. But the College teachers have rejected this offer and they demanded the UGC pay scale in toto. After having discussion with the College Teachers Association, another G.O.NO. ED 88 UNI 88 dt. 30.03.1990 was issued in supersession of G.O.Dt. 25.03.1989 according to which the staffing pattern in Degree College consists of the following cadres :

Cadre	Scale of Pay
1. Lectures	Rs. 2200-4000
2. Lectures(Sr. Scale)	Rs. 3000-5000
3. Lecturers(Selection Grade)	Rs. 3700-5700

In this G.O. earlier proposal to have Principal Gr. I in Degree Colleges was deleted. It has been ordered to continue the existing practice of appointing the senior most teacher in the College as Principal.

The proposal of creating a seperate cadre of Principal has been reviewed agian and the Director of Collegiate Education has sent proposal for creation of two cadre of Principals i.e. Principal in the Colleges where the student strength is less than 1000 and Senior Principal in the Colleges where the students strength is 1000 and above.

As the creation of the posts of Principals require the amendment of C&R Rules which involves consultation of Finance Dept/Law Department/ Dept. of Law & Parliamentary Affairs, etc., the proposals are being examined in detail and Government will take a decision in the matter at the earliest.

ಶ್ರೀವಾಟಾಳ್ ನಾಗರಾಜ್:- ಕನ್ನಡ ಜಾರಿ ಎಪ್ರಿಲ್ ತಿಂಗಳಲ್ಲಿ ಎಷ್ಟರಮಟ್ಟಿಗೆ ಆಗುತ್ತಿದೆ ನೋಡಿ.

ಶ್ರೀ ಎಸ್.ಎಂ.ಯಾಹ್ಯಾ:- ಸ್ಪೆಸ್ಸಿಲ್ ಆಗುತ್ತಿದೆ. ಕನ್ನಡದಲ್ಲಿ ಕಾಪಿ ಕೊಡುತ್ತೇವೆ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇದರ ಬಗ್ಗೆ ಕಾನೂನು ಇಲಾಖೆ, ಫೈನಾನ್ಸ್ ಇಲಾಖೆ ಮತ್ತು ಬೇರೆ ಬೇರೆ ಇಲಾಖೆಗಳ ಪ್ರಪೋಸಲ್ಸ್ ಏನು ಬಂದಿವೆ, ಅವುಗಳನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ದಯಮಾಡಿ ತಾವುಗಳು ಪ್ರಿನ್ಸಿಪಾಲ್ ಪೋಸ್ಟ್‌ಗಳನ್ನು ಮೆಡಿಕಲ್ ಕಾಲೇಜ್‌ನಲ್ಲಿ, ಜ್ಯೂನಿಯರ್ ಕಾಲೇಜುಗಳಲ್ಲಿ ಕ್ರಿಯೇಟ್ ಮಾಡಿದ್ದೀರಿ. ಕೇವಲ ಫಸ್ಟ್‌ಗ್ರೇಡ್ ಕಾಲೇಜುಗಳಲ್ಲಿ ಮಾತ್ರ ನೀವು ಕ್ರಿಯೇಟ್ ಮಾಡಿಲ್ಲ. ಯುಜಿಸಿಯವರು ಕೂಡ ಇದನ್ನು ಮಾಡಿ ಎಂದು ಹೇಳಿದ್ದಾರೆ. ಹಾಗಿದ್ದರೂ ಕೂಡ ಮಾಡಲು ಇಷ್ಟು ಏಕೆ ವಿಳಂಬವಾಯಿತು ಎಂಬ ಬಗ್ಗೆ ತಿಳಿಸಬೇಕು. ಎರಡನೆಯದಾಗಿ ಈ ಹುದ್ದೆಗಳನ್ನು ಕ್ರಿಯೇಟ್ ಮಾಡುವುದರಿಂದ ನಿಮಗೆ ಫೈನಾನ್ಶಿಯಲ್ ಬರ್ಡನ್ ಹೆಚ್ಚು ಬರುವುದಿಲ್ಲ. ಏಕೆಂದರೆ ಈಗಾಗಲೇ ಸೀನಿಯರ್ ಪೋಸ್ಟ್ ಟೀಚರ್‌ಗಳನ್ನು ಪ್ರಿನ್ಸಿಪಾಲ್ ಮಾಡಿದ್ದೀರಿ, ಅವರು ಆ ಸ್ಕೇಲನ್ನು ತಲುಪಿದ್ದಾರೆ. ಹಾಗಾಗಿ ಫೈನಾನ್ಶಿಯಲ್ ಬರ್ಡನ್ ನಿಮಗೆ ಹೆಚ್ಚು ಬರುವುದಿಲ್ಲ. ಆ ಸಮಸ್ಯೆಯು ನಿಮಗೆ ಬರಬಾರದು. ಇವ್ಹೊತ್ತು ಕಾಲೇಜುಗಳಲ್ಲಿ ಯಾರು ಸಿನೀಯರ್‌ಮೊಸ್ಟ್ ಲೆಕ್ಚರರ್ ಇದ್ದಾರೆ, ಅವರಿಗೆ ನೂರು ರೂಪಾಯಿಗಳ ಎಕ್ಸ್‌ಟ್ರಾ ಅಲೋಯೆನ್ಸ್ ಕೊಟ್ಟು ತಾವುಗಳು ಅವರನ್ನು ಪ್ರಿನ್ಸಿಪಾಲ್ ಎಂದು ಮಾಡಿದ್ದೀರಿ. ಆದರೆ ತಾವುಗಳು ಅಲ್ಲಿ ಪ್ರಿನ್ಸಿಪಾಲ್ ಕೈಕೆಳಗೆ ಕೆಲಸ ಮಾಡತಕ್ಕಂಥ ಎನ್‌ಸಿಸಿ ಆಫೀಸರ್ಸ್‌ಗೆ 250ರೂ.ಗಳ ಅಲೋಯೆನ್ಸ್ ಕೊಡುತ್ತೀರಿ. ಆದರೆ ಪ್ರಿನ್ಸಿಪಾಲ್‌ಗೆ ಮಾತ್ರ 100

ರೂ.ಗಳ ಅಲೋಯೆನ್ಸ್ ಕೊಡುತ್ತೀರಿ ಅಂದರೆ ಇದು ಸರಿಯೇ? ಹೈಸ್ಕೂಲ್‌ಗಳಲ್ಲಿ ಮೆಡಿಕಲ್ ಕಾಲೇಜ್‌ನಲ್ಲಿ, ಟೆಕ್ನಿಕಲ್ ಎಜುಕೇಶನ್‌ನಲ್ಲಿ ಜ್ಯೂನಿಯರ್ ಕಾಲೇಜುಗಳಲ್ಲಿ, ಎಲ್ಲಾ ಕಡೆಗಳಲ್ಲಿಯೂ ಪ್ರಿನ್ಸಿಪಾಲ್ ಪೋಸ್ಟ್‌ನ್ನು ಕ್ರಿಯೇಟ್ ಮಾಡಿದ್ದೀರಿ. ಹಾಗೆಯೇ ಫರ್ಸ್ಟ್‌ಗ್ರೇಡ್ ಕಾಲೇಜುಗಳಲ್ಲಿಯೂ ಕೂಡ ಪ್ರಿನ್ಸಿಪಾಲ್ ಹುದ್ದೆಗಳನ್ನು ಮಾಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಆ ಹುದ್ದೆಗಳನ್ನು ಕ್ರಿಯೇಟ್ ಮಾಡಿದ್ದಾರೆ. ಅದೇ ರೀತಿಯಲ್ಲಿ ಇಲ್ಲಿಯೂ ಕೂಡ ಹುದ್ದೆಗಳನ್ನು ಕ್ರಿಯೇಟ್ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ:- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ-ಪಕ್ಷದ ನಾಯಕರು ಈ ಪ್ರಿನ್ಸಿಪಾಲ್ ಕ್ಯಾಡರನ್ನು ಆದಷ್ಟು ಬೇಗ ಮಾಡಿ ಎಂದು ತಿಳಿಸಿದ್ದಾರೆ. ನಾನು ಅವರಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈಗ ಎಲ್ಲಾ ಕಾಲೇಜುಗಳು ಸುಮಾರು 2 ರಿಂದ 4 ಸಾವಿರಗಳವರೆಗೆ ವಿದ್ಯಾರ್ಥಿಗಳಿಂದ ಕೂಡಿದೆ. ಇಲ್ಲಿ ನಾವು ಮತ್ತು ನೀವುಗಳು ಫೈನಾನ್ಶಿಯಲ್ಲಿ ದೃಷ್ಟಿಗಿಂತಲೂ ಮುಖ್ಯವಾಗಿ, ಆಡಳಿತದೃಷ್ಟಿಯಿಂದ ಕೂಡ ಇದನ್ನು ನೋಡಬೇಕಾಗುತ್ತದೆ. ಒಂದು ಸಲ ನಾವು ಹೊಸದಾಗಿ ಪ್ರಿನ್ಸಿಪಲ್ ಕ್ಯಾಡರನ್ನು ಮಾಡಿದರೆ, ಆಡಳಿತಾತ್ಮಕ ದೃಷ್ಟಿಯಿಂದ ಒಂದು ಕಷ್ಟ ಬರಬಹುದೆಂದು ನನಗನ್ನಿಸುತ್ತದೆ. ಅದೇನೆಂದರೆ ಕೆಲವು ಪ್ರೊಫೆಸರ್ಸ್ ಒಳ್ಳೆಯ ಪ್ರಿನ್ಸಿಪಾಲ್ ಮತ್ತು ಒಳ್ಳೆಯ ಅಡ್ಮಿನಿಸ್ಟ್ರೇಟರ್ಸ್ ಆಗಿ ಎಲ್ಲಾ ವಿದ್ಯಾರ್ಥಿಗಳನ್ನು ಮತ್ತು ಅಧ್ಯಾಪಕರನ್ನು ಒಟ್ಟು ಮಾಡಿಕೊಂಡು ಹೋಗುತ್ತಾರೆ. ಆದರೆ ಕೆಲವು ಒಳ್ಳೆಯ ಟೀಚರ್ಸ್ ಇದ್ದರೂ ಕೂಡ ಅವರಿಗೆ ಆಡಳಿತದ ಕ್ಯಾಪಾಸಿಟಿಯು ಬಹಳಷ್ಟು ಕಡಿಮೆ ಇರುತ್ತದೆ. ಇದು ಬಹಳ ಸೆನ್ಸಿಟೀವ್ ಪೋಸ್ಟ್. ಇದರ ಬಗ್ಗೆ ಕೆಲವು ದಿವಸಗಳಿಂದ ನಾನು ಕೂಡ ಯೋಚನೆ ಮಾಡುತ್ತಾ ಇದ್ದೇನೆ. ನಾವು ಏನು ಮಾಡಿದರೂ ಕೂಡ ಅಡ್ಮಿನಿಸ್ಟ್ರೇಷನ್ ಚೆನ್ನಾಗಿ ನಡೆಯುತ್ತಿರಬೇಕು. ಮೊನ್ನೆ ಶಿರಾದಲ್ಲಿ ಎಕ್ಸಾಮಿನೇಶನ್ ಅಲ್ಲಿಯ ಪ್ರಿನ್ಸಿಪಾಲ್ ಸ್ವಲ್ಪ ಸ್ಟ್ರಿಕ್ಟ್ ಆಗಿ ಮಾಡಿದ್ದಕ್ಕೆ ಅವರನ್ನೇ ಹೊಡೆದು ಬಿಟ್ಟಿದ್ದಾರೆ. ಅವರು ಕಂಪ್ಲೀಟ್ ಫ್ರಾಕ್ಚರ್‌ಗೆ ಒಳಗಾಗಿದ್ದಾರೆ. ಈಗ ಕಾಲೇಜುಗಳು ನಡೆಯುತ್ತಿರುವ ಪರಿಸ್ಥಿತಿಯನ್ನು ಕೂಡ ಗಮನದಲ್ಲಿಟ್ಟುಕೊಂಡು ಯಾರು ಇರುವ ಅಧ್ಯಾಪಕರುಗಳಲ್ಲಿ ಗ್ರೇಡ್‌ಒನ್ ಟೀಚರ್ಸ್‌ಗಳಲ್ಲಿ ಅಡ್ಮಿನಿಸ್ಟ್ರೇಟಿವ್ ಕ್ಯಾಪಾಸಿಟಿಯನ್ನು ಹೊಂದಿರುತ್ತಾರೋ, ಅದಕ್ಕೆ ಸರಕಾರದಲ್ಲಿ ಸ್ವಲ್ಪ ಫ್ಲೆಕ್ಸಿಬಿಲಿಟಿ ಇದ್ದರೆ, ಈ ಒಂದು ದೃಷ್ಟಿಯಿಂದಲೂ ಕೂಡ ನಾನು ನೋಡಲು ತಯಾರಾಗಿದ್ದೇನೆ. ಈ ಎಲ್ಲಾ ವಿಚಾರಗಳನ್ನು ಕೂಡ ನಾವು ಮತ್ತು ನೀವು ಮಾತನಾಡಿಕೊಂಡು ಯಾವುದು ಯೋಗ್ಯವಾಗಿದೆ, ಅಡ್ಮಿನಿಸ್ಟ್ರೇಶನ್‌ಗೆ ಯಾವುದು ಯೋಗ್ಯವಾಗುತ್ತದೆ ಎಂಬುದನ್ನು ನೋಡಿಕೊಂಡು ಈ ರೀತಿಯಲ್ಲಿ ಸರಕಾರ ಮಾಡುತ್ತದೆ ಎಂದು ಹೇಳ-ಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ:-ಮಾನ್ಯ ಅಧ್ಯಕ್ಷರೇ, ಅಡ್ಮಿನಿಸ್ಟ್ರೇಶನ್ ಇರಬೇಕೆಂಬ ಮಾನ್ಯ ಸಚಿವರ ಶಂಕೆಯನ್ನು ನಾನು ಒಪ್ಪುತ್ತೇನೆ. ಹಾಗಾದರೆ, ಜ್ಯೂನಿಯರ್ ಕಾಲೇಜ್‌ಗಳಲ್ಲಿ, ಮೆಡಿಕಲ್ ಕಾಲೇಜ್‌ಗಳಲ್ಲಿ ಮುಂತಾಗಿ ಕ್ಯಾಡರ್‌ನ್ನು ಮಾಡಿದ್ದೀರಲ್ಲ? ಅಲ್ಲಿ ನಿಮ್ಮ ಅಡ್ಮಿನಿಸ್ಟ್ರೇಶನ್ ಬೇಡ ಎಂದು ಅರ್ಥವೆ? ಇವೊತ್ತು ಮೆಡಿಕಲ್ ಕಾಲೇಜ್‌ಗಳಲ್ಲಿ ಏನು ಅತ್ಯಾಚಾರ ಅನಾಚಾರ, ರ‍್ಯಾಗಿಂಗ್ ಇತ್ಯಾದಿಗಳು ಏನು ಆಗುತ್ತಿವೆ ಅದು ಇಲ್ಲಿ ಆಗುತ್ತಾ ಇಲ್ಲ. ಒಬ್ಬ ವ್ಯಕ್ತಿಯ ಕ್ಯಾಪಾಬಿಲಿಟಿ ಯಾವಾಗ ನೋಡುತ್ತೀರಿ? ಆ ವ್ಯಕ್ತಿಗೆ ಆ ಒಂದು ಅವಕಾಶವನ್ನು ಕೊಟ್ಟಾಗ ಮಾತ್ರ ಅಳೆಯಲು ಸಾಧ್ಯವಾಗುತ್ತದೆ. ಇಲ್ಲವಾದರೆ ಹೇಗೆ ಸಾಧ್ಯವಾಗುತ್ತದೆ? ಆದ್ದರಿಂದ ಎಲ್ಲಾ ಕಡೆಗಳಲ್ಲಿ ಈ ಪರಿಸ್ಥಿತಿ ಬರುತ್ತದೆ ಎಂಬ ಸಂದೇಹವು ನಿಮ್ಮಲ್ಲಿ ಇರಬಾರದು. ಹಾಗಾದರೆ ಈಗ ಎಲ್ಲೆಲ್ಲಿ ಕೊಟ್ಟಿದ್ದೀರಿ ಅವುಗಳನ್ನು ವಿಥ್‌ಡ್ರಾ ಮಾಡುತ್ತೀರಾ? ಏನಿದ್ದರೂ ಆ ಒಂದು ಸಂಶಯ, ಸಂದೇಹವು ನಿಮ್ಮ ಮನಸ್ಸಿನಲ್ಲಿ ಬರಬಾರದು ಎಂದು ಹೇಳ ಬಯಸುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ:- ಮಾನ್ಯರು ಮೆಡಿಕಲ್ ಕಾಲೇಜ್‌ನಲ್ಲಿ ಹೀಗೆ ಆಗುತ್ತಿದೆ ಎಂದು ಒಂದು ಕಾರಣವನ್ನು ಹೇಳಿದರು. ತಾವುಗಳು ಹೇಳಿದ ಹಾಗೆ ಅಡ್ಮಿನಿಸ್ಟ್ರೇಟಿವ್ ಕ್ಯಾಪಾಸಿಟಿ ಇಲ್ಲದ ಪ್ರಿನ್ಸಿಪಾಲ್‌ರನ್ನು ಹಾಕಿದ್ದರಿಂದ ಅದಕ್ಕೆ ಕಾರಣವಾಯಿತು ಎಂದು ನಾನೂ ಕೂಡ ಯೋಚಿಸುತ್ತಾ ಇದ್ದೇನೆ. ಅದನ್ನು ನಾವು

ಓಪನ್ ಮೈಂಡ್‌ನಲ್ಲಿಟ್ಟುಕೊಂಡು ನೋಡಬೇಕಾಗಿದೆ. ಏಕೆಂದರೆ ಯುಜಿಸಿ ಸ್ಕೇಲ್ ಕೂಡ ನಮಗೆ ಬಹಳಷ್ಟು ಪ್ರಾಬ್ಲೆಮ್ ಉಂಟು ಮಾಡಿದೆ. 7 ನೇ ಪಂಚವಾರ್ಷಿಕ ಯೋಜನೆಯಲ್ಲಿ ಯುಜಿಸಿ ಸ್ಕೇಲ್ಸ್ ಕೊಡಬೇಕಾದಾಗ 80 ಪರ್‌ಸೆಂಟ್ ನಾವು ಕೊಡುತ್ತೇವೆ. 20 ಪರ್‌ಸೆಂಟ್ ನೀವು ಕೈಯಿಂದ ಹಾಕಿ ಎಂದು ಕೇಂದ್ರ ಸರಕಾರದವರು ಹೇಳಿದರು. ನಾವು ಕೂಡ ಒಪ್ಪಿಕೊಂಡಿದ್ದೆವು. 8ನೇ ಪಂಚವಾರ್ಷಿಕ ಯೋಜನೆಯಲ್ಲಿ 100 ಪರ್‌ಸೆಂಟ್‌ನಷ್ಟು ನೀವೇ ಹಾಕಿಕೊಳ್ಳಿ ಎಂದು ಹೇಳಿದ್ದನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ನಮ್ಮ ಸರಕಾರದ ಹಣವನ್ನು ನಾವು ಸರಿಯಾದ ರೀತಿಯಲ್ಲಿ ಉಪಯೋಗಿಸುವ ರೀತಿಯಲ್ಲಿ ಆಗಬೇಕು. ಇದೆಲ್ಲವನ್ನು ವಿಚಾರ ಮಾಡಿ ಪ್ರಿನ್ಸಿಪಾಲ್ ಕೇಡರ್‌ನ್ನು ತೆಗೆದುಕೊಳ್ಳಬೇಕೊ ಬೇಡವೋ ಎಂಬುದನ್ನು ಸರಕಾರ ತೀರ್ಮಾನ ಮಾಡುತ್ತದೆ ಎಂಬುದನ್ನು ಹೇಳಬಯಸುತ್ತೇನೆ.

(4) ಧಾರವಾಡದ ಸಂಪರ್ಕ ಮತ್ತು ಕಟ್ಟಡ ವಿಭಾಗದ ಮುಖ್ಯ ಇಂಜಿನೀಯರ್ ಅವರಿಂದ ಬೆಳಗಾಂ ರಸ್ತೆ ಲೋಕೋಪಯೋಗಿ ಇಲಾಖೆಗೆ ಎಲ್.ಓ.ಸಿಯನ್ನು ಬಿಡುಗಡೆ ಮಾಡುವಲ್ಲಿ ತಾರತಮ್ಯ.

ಶ್ರೀ ಎಸ್.ಎಚ್. ಕೌಜಲಗಿ:- ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಈ ಕರ್ನಾಟಕ ರಾಜ್ಯದ ನಕಾಶೆಯಲ್ಲಿ ಬರೀ ಸೌತ್ ಡಿವಿಜನ್ ಒಂದೇ ಇದೆ. ಆದರೆ ನಾರ್ತ್ ಡಿವಿಜನ್ ಇಲ್ಲ. ಮೊದಲನೆಯ ತಪ್ಪಾಗುತ್ತಿರುವುದು ತಮ್ಮ ಲೋಕೋಪಯೋಗಿಯಲ್ಲಿ ಈ ಸೌತ್ ಜೋನ್ ಮತ್ತು ನಾರ್ತ್ ಜೋನ್ ಅಂತ ಏನಿದೆ ಅದು ಇಲ್ಲ. ಆದರಲ್ಲಿ ತಮಗೆ ಒಂದೇ ಒಂದು ಉದಾಹರಣೆಯನ್ನು ಹೇಳಬೇಕು ಎಂದು ಅಂದರೆ ಯಾವ ಪ್ರಕಾರವಾಗಿ ಅನ್ಯಾಯವಾಗಿದೆ ಅಂದರೆ, ಕಳೆದ 2 ದಿವಸದ ಹಿಂದೆ ಸೌತ್ ಜೋನ್‌ಗೆ 24 ಕೋಟಿ ರೂಪಾಯಿಯನ್ನು ಕೊಟ್ಟಿದ್ದೀರಿ, ನಾರ್ತ್ ಜೋನ್‌ಗೆ 9 ಕೋಟಿ ರೂಪಾಯಿಯನ್ನು ಮೊದಲು ಕೊಟ್ಟಿದ್ದೀರಿ, ಮತ್ತೆ 3.5 ಕೋಟಿ ರೂಪಾಯಿಯನ್ನು ಕೊಟ್ಟಿದ್ದೀರಿ. ತಾವು ಸಮಾಧಾನವಾಗಿ ನಾನು ಹೇಳುವುದನ್ನು ಕೇಳಿ. ನಾನು ಏನಾದರೂ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡುತ್ತಿದ್ದಲ್ಲಿ ತಾವು ನನಗೆ ಹೇಳಿ ನೀವು ಕೊಟ್ಟಂತಹ ಮಾಹಿತಿ ಸರಿಯಿಲ್ಲ ಎಂದು ನಾನು ಕ್ಷಮೆಯನ್ನು ಕೇಳಲಿಕ್ಕೂ ಸಹಿತ ತಯಾರಿದ್ದೇನೆ. ಇಲ್ಲಿಯವರೆಗೆ ಸೌತ್ ಜೋನ್‌ಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ನಾರ್ತ್ ಜೋನ್‌ಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ತಾವು ಅದನ್ನು ನೋಡಿಕೊಳ್ಳಿ. ಇವರಡಕ್ಕೂ ಅಜಗಜಾಂತರ ಡಿಫರೆನ್ಸ್ ಇದೆ. ನಾರ್ತ್ ಜೋನ್‌ಗೆ ತಾವು ಬಿಡುಗಡೆ ಮಾಡಿದ ನಂತರ ಅಲ್ಲಿಯವರು ನಮ್ಮ ಬೆಳಗಾಂಗೆ ಏನು ಬಿಡುಗಡೆ ಮಾಡುತ್ತಾರೆ ಅದು ಅತಿ ಕಡಿಮೆ ಇದೆ, ಅದು ಏತಕ್ಕೆ ಕಡಿಮೆ ಇದೆ ಅಂದರೆ ಇವತ್ತಿನ ದಿವಸ ರಾಜ್ಯದಲ್ಲಿ ಅತಿ ಹೆಚ್ಚಿನ ವಿಸ್ತರಣೆವುಳ್ಳಂತಹ ಜಿಲ್ಲೆ ಅಂದರೆ ಬಿಜಾಪುರ, ಬೆಳಗಾಂ, ಧಾರವಾಡ್; ಈ ಜಿಲ್ಲೆಗಳಿಗೆ ತಾವು ಅನುಸರಿಸಿಕೊಂಡು ಕೊಡಬೇಕಾಗುತ್ತದೆ. ಬೀದರ್‌ಗೆ ಕೊಟ್ಟಿದ್ದಕ್ಕೆ ನನ್ನ ತರಕಾರೂ ಇಲ್ಲ, ರಾಯಚೂರಿಗೆ ಕೊಟ್ಟಿದ್ದಕ್ಕೆ ತಕರಾರು ಇಲ್ಲ, ಗುಲ್ಬರ್ಗಕ್ಕೆ ಕೊಟ್ಟಿದ್ದಕ್ಕೆ ತರಕಾರು ಇಲ್ಲ. ಆದರೆ 18 ಕ್ಷೇತ್ರ ಇದ್ದಂತಹ ಬೆಳಗಾಂ ಜಿಲ್ಲೆಗೆ ಎಷ್ಟು ಕೊಡುತ್ತೀರಿ, 5 ಕ್ಷೇತ್ರ ಇದ್ದಂತಹ ಬೀದರ್‌ಗೆ ಎಷ್ಟು ಕೊಡುತ್ತೀರಿ ಅದನ್ನು ತಾವು ಅದನ್ನು ನೋಡಬೇಕು. ಯಾವ ಪ್ರಕಾರವಾಗಿ ಬರೀ ಪೇಮೆಂಟ್ ನಡೆಯುತ್ತಿದೆ. ಅಂದರೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಧಾರವಾಡದ ಚೀಫ್ ಇಂಜಿನಿಯರ್ ಎಲ್ಲ ಇಂಜಿನಿಯರ್‌ಗಳಿಗೂ ಹೇಳಿದರು. ನೀವು ಟೆಂಟ್ ತೆಗೆದುಕೊಳ್ಳಬೇಕೆಂದು ಹೇಳಿದರು. 18 ಸಾವಿರ ರೂಪಾಯಿಯ ಟೆಂಟ್ 40 ಸಾವಿರ ರೂಪಾಯಿ ಖರ್ಚು 50 ಲಕ್ಷ ರೂಪಾಯಿ ಎಲ್.ಓ.ಸಿ ಪೇಮೆಂಟ್ ಮಾಡಿದ್ದಾರೆ. ಅವರ ಆಫೀಸ್ಸಿನಿಂದ ಪೇಮೆಂಟ್ ಮಾಡುವುದಿಲ್ಲ. ಎಕ್ಸಿಕ್ಯೂಟಿವ್ ಆಫೀಸರರ ಪೇಮೆಂಟ್ ಮಾಡಿಸುತ್ತಾರೆ. ಬೆಳಗಾಂಗೆ ಫೋನ್ ಮಾಡಿ ಹೇಳುತ್ತಾರೆ. ಈ ಪೇಮೆಂಟ್ ಮಾಡು ಅಂತ ಹೇಳುತ್ತಾರೆ.

ಅಧ್ಯಕ್ಷರು:- ತಾವು ಸ್ವಲ್ಪದರಲ್ಲಿ ಹೇಳಿ ಬಜೆಟ್ ಮೇಲೆ ಭಾಷಣವನ್ನು ಮಾಡಿದ ಹಾಗೆ ಹೇಗೆ?

ಶ್ರೀ ಎಸ್.ಹೆಚ್. ಕೌಜಲಗಿ:- ಚೀಫ್ ಇಂಜಿನಿಯರ್ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಕಾರ್ಯಕಾರಿ ಅಭಿಯಂತರರು ಅದಕ್ಕೆ ಹೊಣೆಗಾರರು ಎಂದು ಹೇಳುತ್ತಿದ್ದಾರೆ. ಅಲ್ಲಿ ಡಿವಿಯೇಶನ್ ಮಾಡಿದ್ದಕ್ಕೆ ಆ